# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 13/2025

ದಿನಾಂಕ – 12.03.2026

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಶಾಂತಮ್ಮ | ಪ್ರಾ.ಸಾ. | – | 03 |
| ಗಂಡನ ಹೆಸರು | – | ಶ್ರೀನಿವಾಸ | ಚಾ.ಸಾ. | – | 05 |
| ವಯಸ್ಸು | – | 35 ವರ್ಷ | | | |
| ಉದ್ಯೋಗ | – | ಗೃಹಿಣಿ | | | |
| ವಾಸ ಸ್ಥಳ | – | ಚಿತ್ರಯ್ಯನಹಟ್ಟಿ, ಚಳ್ಳಕೆರೆ ತಾ. | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಈ ಕೇಸಿನ ಚಾಸಾ–2 ನನ್ನ ಪತಿ ಇದ್ದು, ಚಾಸಾ–1, 3 ಮತ್ತು 4 ಇವರು ನನ್ನ ಪತಿಯ ಸ್ನೇಹಿತರಿದ್ದು, ಅದರಿಂದ ಅವರು ನನಗೆ ಗೊತ್ತಿರುತ್ತಾರೆ.

ಈಗ್ಗೆ ಅಂದಾಜು ಒಂದೂವರೆ ವರ್ಷದ ಹಿಂದೆ ಒಂದು ದಿನ ಸಂಜೆ 6.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ನನ್ನ ಪತಿಯಾದ ಚಾಸಾ–2 ಶ್ರೀನಿವಾಸ ನನಗೆ ಫೋನ್ ಮಾಡಿ ನಾನು ಬಿದ್ದು ಗಾಯಗೊಂಡಿದ್ದು, ಅದರಿಂದ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಬಂದಿರುವುದಾಗಿ ತಿಳಿಸಿರುತ್ತಾನೆ. ಆಗ ತಕ್ಷಣ ನಾನು ಚಳ್ಳಕೆರೆ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ಪತಿಯ ಕುತ್ತಿಗೆ, ಕಾಲು ಮತ್ತು ಕೈಗಳಿಗೆ ಗಾಯವಾಗಿದ್ದು ಕಂಡು ಬಂದಿದ್ದು, ಆಗ ಆ ಗಾಯ ಹೇಗೆ ಆಗಿವೆ ಎಂದು ನನ್ನ ಪತಿಯನ್ನು ವಿಚಾರಿಸಿದ್ದು, ಆಗ ನನ್ನ ಪತಿ ನನಗೆ ಹೇಳಿದ್ದೇನೆಂದರೆ, ಈ ದಿನ ಸಂಜೆ ನಾನು ಮತ್ತು ನನ್ನ ಸ್ನೇಹಿತರು ಕೂಡಿ ಜಗಳವಾಡಿಕೊಂಡಿದ್ದು, ಆ ಜಗಳದಲ್ಲಿ ನನಗೆ ಆ ರೀತಿಯ ಗಾಯಗಳು ಆಗಿವೆ ಎಂದು ತಿಳಿಸಿರುತ್ತಾರೆ. ನನ್ನ ಪತಿಗೆ ಯಾರು ಯಾವುದರಿಂದ ಹೊಡೆದರು ಮತ್ತು ಆತನನ್ನು ಯಾರಾದರೂ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿದರೋ ಹೇಗೋ ಎನ್ನುವ ವಿಷಯ ನನಗೆ ಗೊತ್ತಿಲ್ಲ. ನನ್ನ ಪತಿಗೆ ಆದ ಗಾಯಗಳ ವಿಷಯವಾಗಿ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ನನ್ನ ಪತಿಗೆ ಕಟರ್‌ನಿಂದ ಹಲ್ಲೆ ಮಾಡಿ ಗಾಯಗೊಳಿಸಿರುವನೆಂದು ನಾನೇನೂ ಪೋಲೀಸರಿಗೆ ತಿಳಿಸಿರುವುದಿಲ್ಲ.

ಈಗ ನೋಡುತ್ತಿರುವ ಜಪ್ತು ಪಂಚನಾಮೆಯಲ್ಲಿರುವ ಸಹಿ ನನ್ನದೇ ಇರುತ್ತದೆ. ಸದರಿ ಸಹಿಯನ್ನು ನಾನು ಈ ಮೇಲೆ ಹೇಳಿದಂತೆ ನನ್ನ ಪತಿ ಗಾಯಗೊಂಡರೆಂದು ಹೇಳಿದ ಕೆಲ ದಿನಗಳ ನಂತರ ಠಾಣೆಗೆ ಹೋಗಿ ನನ್ನ ಪತಿ ಆ ದಿನ ಧರಿಸಿದ್ದ ಟೀಷರ್ಟ, ಬನಿಯನ್, ಪ್ಯಾಂಟ್ ಮತ್ತು ಚಡ್ಡಿಯನ್ನು ಪೋಲೀಸರ ಮುಂದೆ ಹಾಜರುಪಡಿಸಿದ್ದು, ಆ ವೇಳೆಗೆ ಠಾಣೆಯಲ್ಲಿ ಚಾಸಾ–10 ಮತ್ತು 11 ಹಾಜರಿದ್ದು, ಆಗ ಪೋಲೀಸರು ಅವುಗಳನ್ನು ಮುಂದಿನ ಕ್ರಮಕ್ಕೆ ತೆಗೆದುಕೊಂಡ ಬಗ್ಗೆ ಪಂಚನಾಮೆ ಮಾಡಿ ಪೋಟೋ ತೆಗೆದು, ಆಗ ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಸಹಿ ಗುರುತಿಸಿದ ಪಂಚನಾಮೆಯನ್ನು ಈಗ ನಿಪಿ–6 ಎಂದು, ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೋಗಳನ್ನು ಕೂಡ ಪೋಲೀಸರು ಅದೇ ಸಮಯದಲ್ಲಿ ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ಈಗ ಕ್ರಮವಾಗಿ ನಿಪಿ–7 ರಿಂದ 10 ಎಂದು ಗುರುತಿಸಲಾಯಿತು. ಸದರಿ ನಾನು ಹಾಜರುಪಡಿಸಿದ ಬಟ್ಟೆಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ಈಗ ನೋಡುತ್ತಿರುವ ಟೀಷರ್ಟ, ಬನಿಯನ್, ಪ್ಯಾಂಟ್ ಮತ್ತು ಚಡ್ಡಿ ಅವುಗಳೇ ಇರುತ್ತವೆ. ಅವುಗಳನ್ನು ಈಗ ಕ್ರಮವಾಗಿ ಎಂಒ–8 ರಿಂದ 11 ಎಂದು ಗುರುತಿಸಲಾಯಿತು. ಈ ಮೇಲೆ ಹೇಳಿದ ವಿಷಯವನ್ನು ಮಾತ್ರ ನಾನು ಪೋಲೀಸರ ಮುಂದೆ ಹೇಳಿ ಬರೆಸಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಭಾಗಶಃ ಸಾಕ್ಷ್ಯವನ್ನು ನೀಡಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**– ಪಾಟೀ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ –**

ದಿಃ 20.11.2024 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದು, ಸದರಿ ಹೇಳಿಕೆಯಲ್ಲಿ ದಿಃ 13.11.2024 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ನನ್ನ ಪತಿಯಾದ ಚಾಸಾ–2 ನನಗೆ ಪೋನ್ ಮಾಡಿ ನಾನು ಮತ್ತು ನನ್ನ ಸ್ನೇಹಿತರು ಚಳ್ಳಕೆರೆ ಪಟ್ಟಣದ ಬಳ್ಳಾರಿ ರಸ್ತೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜಿನ ಆರ್ಚ ಬಳಿಯ ಕರೇಕಲ್ಲು ಕೆರೆ ಕಟ್ಟೆಯ ಮೆಟ್ಟೆಲು ಬಳಿ ನಾವು ಇದ್ದಾಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನಮ್ಮ ಬಳಿ ಬಂದು ನನ್ನನ್ನು ಸಾಯಿಸುವ ಉದ್ದೇಶದಿಂದ ಕಟರ್ ನಿಂದ ನನ್ನ ಕುತ್ತಿಗೆಗೆ ಹಾಕಿರುವನೆಂದು ನನ್ನ ಪತಿ ನನಗೆ ತಿಳಿಸಿರುವನು ಎಂದು ನಾನು ಪೋಲೀಸರ ಮುಂದೆ ಹೇಳಿರುವೆನು ಎಂದರೆ ಸರಿಯಲ್ಲ. ಅದೇ ರೀತಿ ಅದೇ ದಿನ ಮೇಲೆ ಹೇಳಿದಂತೆ ನಾವು ಕುಳಿತಿದ್ದಾಗ ಸಂಜೆ 7.30 ರ ಸುಮಾರಿಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ನಾವು ಕುಳಿತ ಸ್ಥಳಕ್ಕೆ ಬಂದು ನನಗೆ ಕುಡಿಯಲು ರೂ. 500/– ದುಡ್ಡು ಕೊಡಿ ಎಂದು ಕೇಳಿದನೆಂದು, ಅದಕ್ಕೆ ನಾವು ನಮ್ಮ ಬಳಿ ಹಣ ಇಲ್ಲವೆಂದು ಆತನಿಗೆ ಹೇಳಿದೆವೆಂದು, ಆಗ ಆರೋಪಿಯಾದ ಚಕ್ರವರ್ತಿ ಮತ್ತು ನಮ್ಮ ಮಧ್ಯೆ ಮಾತಿಗೆ

ಮಾತು ಬೆಳೆದಿದ್ದು, ಆ ವೇಳೆಗೆ ಆರೋಪಿಯು ನಮಗೆ ಅವಾಚ್ಯ ಶಬ್ದಗಳಿಂದ ಸೂಳೇ ಮಕ್ಕಳಾ, ಬೋಳಿ ಮಕ್ಕಳಾ ದುಡ್ಡ ಇಲ್ಲಾ ಅಂತಾ ಹೇಳುತ್ತಿರಾ ಎಂದು ಹೇಳಿ ಕಟರ್ ನಿಂದ ಕುತ್ತಿಗೆಗೆ ಎರಡು ಸಲ ಹಾಕಿದನೆಂದು, ಇದರಿಂದ ನನಗೆ ಕುತ್ತಿಗೆ ಬಳಿ, ಗಲ್ಲದ ಕೆಳಗಡೆ ರಕ್ತಗಾಯವಾಗಿದೆ ಎಂದು ಮತ್ತು ಬಿಡಿಸಲು ಬಂದ ವೀರೇಶನಿಗೆ ಅದೇ ಕಟರ್ ನಿಂದ ಕುತ್ತಿಗೆಗೆ ಹಾಕಿದ್ದು, ಅದರಿಂದ ಆತನ ಕುತ್ತಿಗೆ ಬಳಿ ರಕ್ತಗಾಯವಾಗಿತ್ತೆಂದು ಮತ್ತು ಆ ವೇಳಗೆ ಬಿಡಿಸಲು ಬಂದ ರವಿ ಮತ್ತು ಚಿತ್ತಯ್ಯ ಇವರನ್ನು ಆರೋಪಿ ಜೋರಾಗಿ ನೂಕಿದ್ದು ಅದರಿಂದ ಅವರಿಗೆ ಗಾಯಗಳಾದವೆಂದು ನನ್ನ ಪತಿ ನನಗೆ ಹೇಳಿದನೆಂದು ನಾನು ಪೋಲೀಸರ ಮುಂದೆ ಈಗ ಓದಿ ಹೇಳಲಾದ ನಿಪಿ–11 ರಂತೆ ಹೇಳಿಕೆಯನ್ನು ಕೊಟ್ಟಿರುವೆನು ಎಂದರೆ ಸರಿಯಲ್ಲ.

ನಿಪಿ–11 ರಂತೆ ನಾನು ಹೇಳಿಕೆಯನ್ನು ಕೊಟ್ಟಿದ್ದು ಮತ್ತು ನನಗೆ ಎಲ್ಲಾ ವಿಷಯ ಗೊತ್ತಿದ್ದು, ಆದರೂ ಕೂಡ ಈಗ ಪೂರ್ಣ ಮಾಹಿತಿ ನನಗೆ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ. ಹಾಲಿ ನಾವು ಆರೋಪಿಯೊಂದಿಗೆ ಕೇಸನ್ನು ರಾಜೀ ಮಾಡಿಕೊಂಡಿರುತ್ತೇವೆ. ನಾವು ಕೇಸನ್ನು ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿರುವ ಕಾರಣ, ಈಗ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿಯ ಪರ – ಶ್ರೀಮತಿ ಕೆ.ಎಸ್.ಆರ್. ವಕೀಲರಿಂದ –**

ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ನನ್ನ ಪತಿ ನಾನು ಮತ್ತು ನನ್ನ ಸ್ನೇಹಿತರು ಗಲಾಟೆ ಮಾಡಿಕೊಂಡಿರುವವೆಂದು ನನಗೆ ಹೇಳದೇ ನಾನೇ ಬಿದ್ದು ಗಾಯಗೊಂಡಿರುವೆನು ಎಂದು ನನಗೆ ಹೇಳಿರುವರು ಎಂದರೆ ಸರಿ. ನಿಪಿ–6 ಎಂದು ಗುರುತಿಸಿದ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ–7 ರಿಂದ 10 ಎಂದು ಗುರುತಿಸಿದ ಫೋಟೋಗಳನ್ನು ಏಕೆ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲೀಸರು ದಾಖಲೆಗೆ ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುವೆನು ಎಂದರೆ ಸರಿ. ಚಾಸಾ–10 ಮತ್ತು 11 ಇವರು ನನ್ನ ಪತಿಯಾದ ಚಾಸಾ–2 ಇವರ ಸ್ನೇಹಿತರು ಎಂದರೆ ಸರಿ. ನಾನು ಠಾಣೆಗೆ ಹೋಗಿ ನಿಪಿ–6 ಎಂದು ಗುರುತಿಸಿದ ಪಂಚನಾಮೆಗೆ ಸಹಿ ಮಾಡಿದೆನೆಂದು ಹೇಳಿದಾಗ ಸಂಜೆ 4.30 ಗಂಟೆ ಆಗಿತ್ತು.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.